# ‘ನಿನ್ನ ಹೆಸರು...’

ಕೆರೆಯ ಆ ಮೂಲೆಯಲ್ಲಿ ಈ ಚಳಿಗಾಲದ ಶುರುವಿನಲ್ಲೂ ತಾವರೆಗಳಿನ್ನೂ ಅರಳುತಿದ್ದವು. ಕಲ್ಲ ಮೇಲೆ, ನೀರಿನೊಳಕ್ಕೆ ಕಾಲಿಳಿಬಿಟ್ಟು ಕುಳಿತೆ. ಪುಟ್ಟ ಪುಟ್ಟ ಮೀನುಗಳು ಕಾಲುಗಳನ್ನು ಚುಂಬಿಸಲಾರಂಭಿಸಿದವು. ಕುಳಿತವನ ಬಳಿಗೆ ಮುದ್ದೆಮಾಡಿದ ಕರ್ಚೀಫನ್ನೆಸೆದಳು ನನ್ನವ್ವ. ನೀರಿನೊಳಕ್ಕೆ ಕರ್ಚೀಫ್ ಹರಡುತ್ತಾ, ಇನ್ನೊಂದು ಕಲ್ಲಿನಂಚಿನಲ್ಲಿ ಬಟ್ಟೆ ಬಡಿಯುತಿದ್ದವಳೆಡೆಗೆ ನೋಡಿ ನಸುನಕ್ಕೆ. ಸಣ್ಣವನಿದ್ದಾಗ ನಾನು ಮೀನುಹಿಡಿಯಾಟವಾಡುತಿದುದ್ದನ್ನು ನನ್ನಂತೆಯೇ ಅವಳೂ ಮರೆಯುವುದಿಲ್ಲ!

ಸಿರಿಗೆರೆಯ ನೀರಿನಲಿ ಬಿರಿದ ತಾವರೆಯಲ್ಲಿ ಕೆಂಪಾಗಿ ನಿನ್ನ ಹೆಸರು

**(ಇಷ್ಟು ಹೊತ್ತಿಗಾಗಲೇ ಅವಳು ಆಫೀಸ್ ತಲುಪಿ, ಕಂಪ್ಯೂಟರ್ ಆನ್ ಮಾಡಿ ಮೆಯ್ಲ್ ನೋಡುತ್ತಿರುತ್ತಾಳೆ; ಯಾವ ಡ್ರೆಸ್ ಇವತ್ತು? ಬಹುಶಃ ತಲೆಗೂದಲಿಗೆ ಅಸಡ್ಡೆಯಿಂದೆಂಬಂತೆ ಪಿನ್ನು ಸಿಕ್ಕಿಸಿಕೊಂಡು ಬಂದಿರುತ್ತಾಳೆ, ನಾನಿದ್ದಿದ್ದರೆ, ಎದುರು ಸಿಕ್ಕಿದ್ದಿದ್ದರೆ ಮತ್ತು ನಾನಾಗೇ ಹೇಳಿದ್ದಿದ್ದರೆ ಉತ್ತರವಾಗಿ ಕಿರುನಗೆಯೊಡನೆ ಪುಟ್ಟದೊಂದು ‘ಹಾಯ್’)**

ಅವ್ವ ನನ್ನಮೇಲಕ್ಕೆ ನೀರನ್ನೆರಚಿ, ಬೆಚ್ಚಿಬಿದ್ದವನನ್ನು ನೋಡಿ ನಕ್ಕಳು, ‘ಏನೋ ಕಂದಾ, ಹಗುಲ್ಗನಸ್ ಕಾಣ್ತಿದಿಯಾ? ಬಾ ಈ ಬೆಶ್ಶೀಟ್ ಹಿಂಡಾನ’ ನಾನು ಕೆಂಪಗಾಗಿ ನಗುತ್ತ, ನೀರಿನೊಳಗೆ ನನ್ನ ಕರ್ಚೀಫಿನ ಗುಳಿಯೊಳಗಿದ್ದ ಎರಡು ಮೀನುಗಳನ್ನು ಹೊರ ಹೋಗಗೊಟ್ಟು ಎದ್ದೆ.

* * * * * *

ನನ್ನವ್ವನಿಗೆ ಎದೆಯುದ್ದ ಬೆಳೆದ ಮಗನನ್ನು ತೋರಿಸಿಕೊಂಡು ಓಡಾಡುವುದೇ ಹೆಮ್ಮೆ. ಊರ ಹೊರಗಿನ ನಮ್ಮ ಮನೆಯಿಂದ ‘ಊರೊಳ್ಗೆ ಕಾರ್ತಿಕ ದೀಪೊತ್ಸವದ್ ಎರುಡ್ನೇ ದಿನ ಇವತ್ತು, ಬಾ ಹನುಮಂತನ್ ಗುಡೀಗ್ ಹೋಗ್ ಬರಾಣ’ ಅಂತ ಸಂಜೆ ನನ್ನನ್ನು ಹೊರಡಿಸಿಕೊಂಡು ಹೊರಟೇ ಬಿಟ್ಟಳು, ಕೆರೆಯ ಏರಿಗುಂಟ ಹಾಯುವಾಗ ಅರಳಿದ್ದ-ಅರಳುತಿದ್ದ ತಾವರೆಗಳು ಸಂಜೆಗತ್ತಲಿಗೆ ಬಣ್ಣ ಕಳೆದುಕೊಳ್ಳುತಿದ್ದವು.

ಗುಡಿಯ ಗೋಪುರದಲ್ಲಿ ಮೆರೆವ ದೀಪಗಳಲ್ಲಿ ಬೆಳಕಾಗಿ ನಿನ್ನ ಹೆಸರು

**(ಅವಳ ಕೈನಿ ಓವರ್‌ಬ್ರಿಡ್ಜ್ ದಾಟುತ್ತಿರುತ್ತದೆ; ಸಾಯುತ್ತಿರುವ ಸೂರ್ಯನ ಕಿರಣಗಳು ಇದೇ ಸಮಯವೆಂದುಕೊಂಡು ಬಿಲ್ಡಿಂಗ್‌ಗಳ ಮೇಲಿನಿಂದ ಇಣುಕಿ, ಹೆಲ್ಮೆಟ್ ಗ್ಲಾಸಿನೊಳಗಿಂದ ಅವಳ ಮುಖವನ್ನು ಬೆಚ್ಚಗೆ ಸ್ಪರ್ಶಿಸುತ್ತಿರುತ್ತವೆ, ಅವಳು ನಸುನಗುತ್ತಿರುತ್ತಾಳಾ?)**

ಗುಡಿಯ ಮುಂದೆಲ್ಲ ಸಣ್ಣ ಮಕ್ಕಳು ಆಡುತಿದ್ದವು, ಎದುರಿಗೇ ನನ್ನ ಸೊದರ ಮಾವ ಸಿಕ್ಕು ಮಾತನಾಡಿಸಿದರು, ಕುಶಲೋಪರಿ ವಿಚಾರಿಸಿದರು, ‘ಮನೀಗ್ ಬಂದ್ಹೋಗು’ ಅಂದರು. ಊರೊಳಗಿನ ಹುಡುಗಿಯರೆಲ್ಲ ಪೂಜೆಗೆ ಗುಂಪಾಗಿ ಮಾತನಾಡುತ್ತ ನಗುತ್ತಾ ಹೋಗುತಿದ್ದಾರೆ; ಅವರಲ್ಲಿ ಕೆಲವರು ನನ್ನ ಗುರುತು ಹಿಡಿದರೇನೋ? ಮಾತು ಮೆದುವಾಯಿತು, ನಗು ಜೋರಾಯಿತು.

* * * * * *

ನನ್ನ ಕೈಗೆ ಗಂಗೆಯ ಕರುವಿನ (ಅದಕಿನ್ನೂ ಹೆಸರಿಟ್ಟಿಲ್ಲ; ನಾನು ನಿನ್ನೆ ರಾತ್ರಿ ಹೇಳಿದ ಹೆಸರಿನ್ನೂ ಅವ್ವನ ಬಾಯಿಗೇ ಒಗ್ಗಿಲ್ಲ, ನಾನು ಹೇಳಿಕೊಟ್ಟದ್ದನ್ನು ಅವಳು 'ನಿಯಾರಿಕ' ಅಂದಳು!) ಹಗ್ಗಕೊಟ್ಟು ಅವ್ವ ಬದುವಿನ ಮೇಲೆ ಬೆಳೆದಿದ್ದ ಹಸಿರುಹುಲ್ಲಿನ ಹೊರೆ ಕಟ್ಟುತ್ತಿದ್ದಾಳೆ. ಇನ್ನೂ ಸಣ್ಣ ಕರು, ಇದುವರೆಗೂ ಜಿಗಿದಾಡುತಿದ್ದುದು ಸುಮ್ಮನೆ ಕಿರುಗಣ್ಣಿನಿಂದ ನನ್ನನ್ನು ನೋಡುತ್ತಿದೆ, ಅನತೀ ದೂರದಲ್ಲಿ ಮೇಯುತ್ತಿರುವ ಅಮ್ಮನನ್ನೂ ಗಮನಿಸುತ್ತಿದೆ; ಕಿವಿಗಳನ್ನು ಅತ್ತಿತ್ತ ಬಡಿಯುತ್ತಿದೆ...

ಜೋಯಿಸರ ಹೊಲದೊಳಗೆ ಕುಣಿವ ಕೆಂಗರುವಿನ ಕಣ್ಣಲ್ಲಿ ನಿನ್ನ ಹೆಸರು

**(ಅವಳ ಕಣ್ಣುಗಳೂ ಕೂಡ ಈ ಕರುವಿನಷ್ಟೇ ಇಷ್ಟಿಷ್ಟೇ ಚಿಕ್ಕವು, ಆ ಪುಟ್ಟಕಣ್ಣುಗಳಲ್ಲಿ ಸಾವಿರ ಕನಸುಗಳು! ಥ್ಯಾಂಕ್ ಗಾಡ್! ಬಟ್ಟಲು ಕಂಗಳಾಗಿದ್ದರೆ ಇನ್ನೆಷ್ಟು ಕನಸುಗಳ ಬಚ್ಚಿಟ್ಟುಕೊಳ್ಳುತಿದ್ದಳೋ? ಈಗಲೇ ಕಣ್ಣುಗಳಾಳ ತಿಳಿಯದೇ ತೊಳಲಾಡುತ್ತಿದ್ದೇನೆ, ಬಟ್ಟಲುಕಂಗಳಾಗಿದ್ದರೆ ಅರ್ಥೈಸಿಕೊಳ್ಳಲಾಗದೇ ಅವುಗಳಲ್ಲಿ ಮುಳುಗಿ ಸಾಯಬೇಕಾಗಿತ್ತು ಅಷ್ಟೇ!)**

'ಅಗಗ... ಕಣ್ಣ್ ಬಿಟ್ಬಿಟ್ಟಲ್ಲೋ ಮಗಾ' ಅಮ್ಮ ಕಟ್ಟುತ್ತಿದ್ದ ಹೊರೆ ಬಿಟ್ಟು ಕೂಗು ಹಾಕಿದಳು. ನಾನು ಎಚ್ಚೆತ್ತು ನೋಡಿದೆ; ನಾನು ಅನ್ಯಮನಸ್ಕನಾಗಿದ್ದನ್ನೇ ಗಮನಿಸಿ ಕಳ್ಳ ಕರು ಹಗ್ಗ ಬಿಡಿಸಿಕೊಂಡು ಓಡಿತ್ತು. ಬಿಳಿಪಂಚೆಯನ್ನೆತ್ತಿ ಕಟ್ಟಿಕೊಂಡು ಓಡುವಷ್ಟರಲ್ಲಿ ಅದು ಆವರಮ್ಮನ ಕೆಚ್ಚಲಿಗೆ ಬಾಯಿ ಹಾಕಾಗಿತ್ತು, ನಾನು ಬಿಡಿಸಿಕೊಳ್ಳಲಾರದೇ ನೋಡುತ್ತ ನಿಂತೆ.

* * * * * *

'ಇಷ್ಟು ಮೆತುಗ್ಲ ಆದ್ರೆ ಬದುಕ್ ಮಾಡ್ದಂಗೇಯ' ಜೋರಾಗಿ ನಗುತ್ತ ಧಾವಿಸಿಬಂದ ಅಮ್ಮ ಕರುವನ್ನು ಕೆಚ್ಚಲಿನಿಂದ ಬಿಡಿಸಿಕೊಂಡು ಹಗ್ಗ ನನ್ನ ಕೈಗೆ ಕೊಟ್ಟು ಗಂಗೆಯನ್ನು 'ಓಹೋ, ಇದುಕ್ಕೇ ಕಾಯ್ತಾ ಮೇಯ್ದೇ ಇಲ್ಲೇ ನಿಂತಿದ್ದೆಯೇ' ಎಂದು ಬೈಯುತ್ತ ಕೈಯಲ್ಲೇ ತಳ್ಳುತ್ತ ಆ ಕಡೆಯ ಬದುವಿಗೆ ಹೊಡೆದುಬಂದಳು.

ತಾಯ ಮೊಲೆಯಲ್ಲಿ ಕರು ತುಟಿಯಿಟ್ಟು ಚಿಮ್ಮಿಸಿದ ಹಾಲಲ್ಲಿ ನಿನ್ನ ಹೆಸರು

**(ಅವಳ ಹೆಸರೂ ನನಗೆ ಗೊತ್ತಿಲ್ಲದ ದಿನಗಳಲ್ಲಿ ನಾನು ಅವಳನ್ನು ದಿಟ್ಟಿಸಿಯಷ್ಟೇ ನೋಡುತ್ತಿದ್ದೆ; ಜೊತೆಯಲಿದ್ದವರಿಗೆ ತಿಳಿಯದ ಹಾಗೆ! ನಾನೇ ಮೌನಿಯೆಂದರೆ ಆಕೆ ದಿವ್ಯಮೌನಿ! ಅವಶ್ಯಕತೆಯಿಲ್ಲದೇ ಯಾರೊಂದಿಗೂ ಮಾತಿಲ್ಲ! ಮೌನ ಮಾತಾಗಿದ್ದೇ ತೀರಾ ಇತ್ತೀಚೆಗೆ)**

'ಇವತ್ ಮದ್ಯಾನ ಊರ್ಕಣದಾಗಿನ್ ಅರಳಿ ಮರ್ದಲ್ಲಿ ಉಯ್ಯಾಲೆ ಪಂದ್ಯ ಈತೆ, ಆಮೇಲೆ ಸಂಜೆ ನಾಗು ಮನೆಗೆ ಹೋಗ್ ಬರಾನ' ಅಮ್ಮ ಮಾತನಾಡುತ್ತಲೇ ಸೆರಗಿನ ತುದಿಯನ್ನೇ ಎತ್ತಿ ಸಿಂಬೆಯನ್ನಾಗಿ ಮಾಡಿಕೊಂಡು, 'ಬಾ, ಆಕಡೆ ಕೈಯಲ್ಲ್ ಹಗ್ಗ ಹಿಡ್ಕಂಡೇ ಈ ಹೊರೆ ಹೊರ್ಸು ಬಾ' ಅಂದಳು, ಜೊತೆಗೆ ಮನೀಗ್ ಹೋಗುತ್ಲು ಮಜ್ಗೆ ಮಾಡ್ಕಂಡ್ ಕುಡಿಯನ ಅಂತ ಸೇರಿಸಿದಳು...

* * * * * *

ಇಳೀ ಮಧ್ಯಾಹ್ನದ ಬಿಸಿಲಲ್ಲಿ ಊರ ಹೊರಗಿನ ಕಣದ ಮಧ್ಯದಲ್ಲಿರುವ ಅರಳಿ ಮರದ ಹತ್ತಿರ ಸಣ್ಣ ಸಣ್ಣ ಸೋಗೆ ಚಪ್ಪರಗಳು, ಮಾವಿನೆಲೆ-ಬಣ್ಣದ ಕಾಗದದ ತೋರಣಗಳು, ಅರಳೀ ಮರಕ್ಕೆ ಬಾವಿಹಗ್ಗದಿಂದ ಕಟ್ಟಿದ, ಚೆಂಡುಹೂವಿನ ಎರಡು ಉಯ್ಯಾಲೆಗಳು, ನನ್ನ ಊರಿನ ಸ್ಕೂಲಿನಲ್ಲಿ ಒಟ್ಟಿಗೇ ಓದಿದ್ದ ನನ್ನ ಸ್ನೇಹಿತರು, ಊರಿನ ಹುಡುಗಿಯರು, ಆಸರೆಗೆ ಮಜ್ಜಿಗೆ ಗಡಿಗೆಗಳು, ಪೀಪಿ-ಡೋಲುಗಳು. ಪಂದ್ಯ ಶುರುವಾಗೇ ಬಿಟ್ಟಿತಲ್ಲ, ಅಮ್ಮ ನನ್ನನ್ನು ಸ್ನೇಹಿತರೊಡನೆ ಬಿಟ್ಟು ಗಹಗಹಿಸಿ ನಗುತ್ತ ಹೆಂಗಸರ ಗುಂಪಿನೊಳಕ್ಕೆ ತೂರಿಕೊಂಡಳು...

ಹೂಬನದ ಬಿಸಿಲಲ್ಲಿ ನರ್ತಿಸುವ ನವಿಲಿನ ದನಿಯಲ್ಲಿ ನಿನ್ನ ಹೆಸರು

**(ಮೌನ ಮಾತಾದಮೇಲೂ ಮಾತು ಎತ್ತಲೂ ಹೊರಳುತ್ತಿರಲಿಲ್ಲ. 'ಹ್ಯಾಗಿದೀಯ?', 'ಚೆನ್ನಾಗಿದೀನಿ, ನಿನು?' ಓ ಗಾಡ್, ಇವಳೊಂದಿಗೆ ಬೇರೇನನ್ನಾದರೂ ಮಾತು ಬೆಳೆಸುವುದಾದರೂ ಹೇಗೆ ಅಂದುಕೊಳ್ಳುತ್ತಿರುವಾಗಲೇ ಅವನೇ ದಾರಿ ತೋರಿಸಿದ! ಅವಳಾಗೇ ಮಾತನಾಡುವ ಸಂದರ್ಭ ತಂದಿಟ್ಟ! ತದನಂತರ ಓತಪ್ರೋತವಾಗಲ್ಲದಿದ್ದರೂ 'ಹ್ಯಾಗಿದೀಯ'ಕ್ಕಿಂತ ಮುಂದಕ್ಕಾದರೂ ಮಾತು ಹೊರಳುತೊಡಗಿತ್ತು!)**

ನಾನೂ ರಘುವೂ ಒಂದು ತಂಡ ಕಟ್ಟಿಕೊಂಡು ಉಯ್ಯಾಲೆ ಆಡಿದೆವು; ನಾನು ಉಯ್ಯಾಲೆಯಲ್ಲಿ ಕುಳಿತು, ನನ್ನ ಹಿಂದೆ ಆಚೀಚೆ ಕಾಲು ಹಾಕಿ, ನಿಂತುಕೊಂಡು ಅವನೂ ಜೋಕಾಲಿ ಜೀಕಿದೆವು, ಕೆಳಗಿದ್ದವರಿಂದ ಹೂವು, ಕೆನ್ನೀರಿನ ಪ್ರೋಕ್ಷಣೆ, ಅತ್ತ ಕಡೆಯಿಂದ ಎರಚಿದ್ದು ಇತ್ತ ಕಡೆಯ ಗುಂಪಿಗೆ ಬಿದ್ದು ಕೂಗಾಟ, ನಗು! ಆ ಗುಂಪಿನೊಳಗೆಲ್ಲಾದರೂ ಅವಳೇ ನಿಂತಿದಿದ್ದರೆ? ಬಿಸಿಲಿಗೆ ಕೆಂಪಗಾಗಿ ಜೋರಾಗಿ ನಗುತ್ತ, ಕಿರುಚುತ್ತಿದ್ದಳೇನೋ?

* * * * * *

ಅರಳೀ ಮರದಿಂದ ಅನತೀ ದೂರದ ಬೇಲಿಯ ಮೇಲೆಲ್ಲ ಹಿಂದಿದ್ದ ಮರಗಳಿಂದ ಕೇದಗೆ ಹೂವುಗಳುದುರಿದ್ದವು. ಪುಟ್ಟ ಪುಟ್ಟ ಹುಡುಗಿಯರು ಹೂವುಗಳನ್ನು ಆರಿಸಿಕೊಂಡು ತಮ್ಮ ಬಣ್ಣ-ಬಣ್ಣದ ಲಂಗಗಳನ್ನೆತ್ತಿ ಹಿಡಿದುಕೊಂಡು ತುಂಬಿಕೊಳ್ಳುತ್ತಿದ್ದರು. ನಾನೂ ರಘುವೂ ಅವಕ್ಕೊಂದಿಷ್ಟು ಹೂವುಗಳನ್ನಾರಿಸಿಕೊಟ್ಟೆವು. ರಘು ಆ ಪುಟ್ಟ ಹುಡುಗಿಯರೊಡನೆ ಜಗಳಾಡುತ್ತ, ಅವರಿಂದ ಬೈಸಿಕೊಳ್ಳುತ್ತ ಅವರ ಪರಿಚಯ ಮಾಡಿಕೊಟ್ಟ. 'ಇವಳಿದಾಳಲ್ಲ, ಹಲ್ಬೀರಿ, ಲಾರಿ-ಪುಟ್ಟಣ್ಣನ್ ಮಗ್ಳು, ಅವರಪ್ಪ ಲಾರೀಲಿ ಫಾರಿನ್ಗೋದಾಗ ಇವ್ಳನ್ ಅಲ್ಲಿಂದ ತಂದುದ್ದಂತೆ, ಏನಮ್ಮೀ ನಿನ್ಹೆಸ್ರು?...'

ಹೊಂದಾಳೆ ಹೂವಿನಲಿ ಹೊರಟ ಪರಿಮಳದಲ್ಲಿ ಉಯ್ಯಾಲೆ ನಿನ್ನ ಹೆಸರು

**(ಹೆಸರೇ ನೆನಪು, ನೆನಪೇ ಹಸಿರು! ಎದೆ ಭಾರವಾಗುತ್ತದೆ, ನಾನವಳಿಗೆ ಯೋಗ್ಯನೇ? ಅವಳು ಹೂಂ ಅಂದಾಳೇ? ಅವಳ ಈ ಉತ್ತರಕ್ಕೆ ನಾನು ಪ್ರಶ್ನೆ ಹಾಕುವುದಾದರೂ ಹೇಗೆ? ಯಾವಾಗ? ಎಲ್ಲಿ? ಅವಳ ಇಷ್ಟಾನಿಷ್ಟ ನನಗೆಷ್ಟು ಗೊತ್ತು?)**

ಉಯ್ಯಾಲೆ ಮುಗಿಯುತ್ತ ಬಂದಾಗ ಅಮ್ಮ ನನ್ನ ಬಳಿ ಬಂದು ಅಲ್ಲಿದ್ದ ಹುಡುಗಿಯರನೆಲ್ಲ ದೂರದಿಂದಲೇ ಪರಿಚಯ ಮಾಡಿಕೊಡತೊಡಗಿದಳು, 'ಅವ್ಳು ಸ್ರೀದರ್ ಮೇಷ್ಟ್ರು ಮಗಳು ಆರಾದ್ನ, ಇವಳು-ಹಸ್ರು ದಾವ್ಣಿ, ನಮ್ ಮಂಜುಳಿ ಮಗ್ಳು...', 'ಸವಿತಾ? ಎಷ್ಟುದ್ದ ಆಗಿದಾಳೆ...' ಅಂದು ಏನೋ ನೆನಪಾಗಿ ಕೇಳಿದೆ, 'ಶಾರಿ ಕಾಣ್ತಾ ಇಲ್ಲ?' ಅಂತಾ ಕೇಳಿದೆ, ಅವ್ವ ಮಾತು ಮರೆಸುವಂತೆ 'ಏನಪ್ಪ, ಗೊತ್ತಿಲ್ಲ. ಸಂಜೀಗ್ ಅವರ್ಮನಿಗೇ ಹೋಗ್ತಿವಲ್ಲ ನೋಡುವಂತೆ ಬಿಡು' ಅಂದಳು.

* * * * * *

ಕಾಫಿತಂದಿಟ್ಟ ಶಾರಿ ನನ್ನನ್ನು ದಿಟ್ಟಿಸಿನೋಡಿ ನಕ್ಕಳು, ನಾನು ಅವಲಕ್ಕಿ, ಜಿಲೇಬಿ ತಿಂದ ಕೈಯೊರೆಸಿಕೊಳ್ಳುತ್ತ 'ಹ್ಯಾಗಿದೀಯ ಶಾರಿ?' ಅಂದೆ, ಚೆನ್ನಾಗಿದೀನಿ, 'ನೀವು?' ಎಂದು ನಕ್ಕು ಒಳಗೋಡಿದಳು. ವಿಚಿತ್ರ! ಎಲ್ಲಿಗೋ ಹೊರಡುವಂತೆ ಅಲಂಕಾರ ಮಾಡಿಕೊಂಡಿದ್ದಳು, ಅಲ್ಲದೇ ಸೀರೆ ಬೇರೆ, ಇನ್ನೂ ವಿಚಿತ್ರವೆಂದರೆ ಅವಳು ನನ್ನನ್ನು 'ನೀವು' ಅಂದದ್ದು! ಒಂದೇ ಊರಿನವರಾದರೂ ಮಾವನ ಮನೆಯವರಿಗೂ ನಮಗೂ ಮಾತಕತೆ ಕಡಿಮೆ. ಆದರೂ ನನ್ನನ್ನು ಅವಳು ಯಾವತ್ತೂ ಬಹುವಚನದಲ್ಲಿ ಮಾತನಾಡಿಸಿರಲಿಲ್ಲ. ಮೆಲ್ಲನೆ ಕೆಮ್ಮಿ ನಾಗುಮಾವ ಮಾತು ಶುರುಮಾಡಿದರು,

ಮರೆತಾಗ ಬಳಿಗೆ ಬಾರದೇ ಮೋಡ ಮರೆಯೊಳಗೆ ಬೆಳ್ದಿಂಗಳು ನಿನ್ನ ಹೆಸರು

**(ಹೆಸರು ಮರೆಯುವುದೇ? ಅಂದೊಮ್ಮೆ ವೀಕೆಂಡಿನಲ್ಲಿ ಸುಮ್ಮನೆ ಬೇಜಾರಾಗಿ ಕೀಟ್ಸ್‌ನ ಕವನಗಳನ್ನೋದುತ್ತ ಕುಳಿತಿದ್ದೆ ಟೆರೇಸ್ ಮೇಲೆ ಕುಳಿತಿದ್ದೆ. ಅವಳ ನೆನಪಾಯಿತು, ಆದರೆ ಅವಳ ಮುಖವೇ ನೆನಪಿಗೆ ಬರುತ್ತಿಲ್ಲ! ಎದೆ ಢವಢವಿಸಿ ನನ್ನನ್ನು ನಾನೇ ಬೈದುಕೊಳ್ಳುತ್ತ ಕೆಳಗಿಳಿದು ಬಂದು ಅವಸರ–ಅವಸರವಾಗಿ ಕಂಪ್ಯೂಟರ್ ಆನ್ ಮಾಡಿದೆ, ಅವಳ ಫೋಟೋಗಳಿದ್ದವು ಅದರಲ್ಲಿ!)**

ಹೃದಯ ಬಡಿತ ನನ್ನ ನಡಿಗೆಯಷ್ಟೇ ವೇಗವಾಗಿತ್ತು. ಗುಡಿಯೊಳಗೆ ನೀಲಾಂಜನದ ಮುಂದೆ ಕೆಂಪುಗೆನ್ನೆಯ ಮಾರುತಿ, ಗುಡಿಯ ಮೇಲೆಲ್ಲ ದೀಪಗಳು. ಗುಡಿಯನ್ನು ದಾಟಿ, ಮನೆಗೆ ಹೋಗುವ ಕಾಲುದಾರಿ ಹಿಡಿದು ಕೆರೆ ಏರಿ ತಲುಪಿದೆ. ಸಂಪೂರ್ಣ ಕತ್ತಲಾಗಿತ್ತು, ಆ ಅಂಚಿನ ತಾವರೆಗಳು ಕಾಣುತ್ತಿರಲಿಲ್ಲ, ನೀರು ಕಾಡಿಗೆಯ ಮಡುವಾಗಿತ್ತು. ಇನ್ನೂ ಪೌರ್ಣಮಿಯ ಚಂದ್ರೋದಯವಾಗಬೇಕು. ಅವ್ವ ಹಿಂದಿನಿಂದ ಓಡಿಬರುತ್ತ ದೂರದಿಂದಲೇ ಕೂಗಿದಳು, 'ರವೀ, ರವ್ಯಾ, ಸ್ವಲ್ಪ ನಿಂತ್ಕಳೋ ಮಗ್ನೇ' ನಾನು ನಿಂತೆ.

* * * * * *

'ಆಯ್ತು ಮಗಾ, ನೀನ್ಹೇಳ್ದಂಗೇ ಆಗ್ಲಿ. ನಾನು ಸುಮ್ಸುಮ್ನೇ ನಾಗುಗೆ ಮಾತ್ ಕೊಡಲ್ಲ, ಅವ್ನೇಕ್ಯಾವಾಗ್ಲಾದ್ರೂ ಮಾತಾಡ್ಕಂಬನಂತೆ ಅಂತೀನಿ. ನೀನ್ ಬೇಜಾರ್ ಮಾಡ್ಕಬೇಡ, ಇದು ನಾಗುನೇ ಹೇಳ್ಕೊಟ್ಟಿದ್ದು. ತವುರ್‌ಮನೆ ಅಂತ ನಾನು ಮರ್ಳಾಗ್ ಬಿಟ್ಟೆ. ಆ ಮಾತ್ ಬಿಟ್ಟಾಕು ಈಗ, ನೀನ್ಹೇಳ್ದಲ್ಲ–ಅವಳ್ನ ಮಾತಾಡ್ಸು, ಎಲ್ಲಿಯೋರು ಅವ್ರು ಎಲ್ಲ ತಿಳ್ಕ, ತಡ ಮಾಡ್ಬೇಡ. ನಂಗೇನ್ ಬೇಜಾರಿಲ್ಲ ಮಗ್ನೇ. ನಂಗ್ಯಾನೆ ನಿನ್ ಬಿಟ್ರೆ ಇನ್ಯಾರಿದಾರೆ?' ಮಾತನಾಡುತ್ತ ಅಮ್ಮ ಕಣ್ಣೀರಾಗಿದ್ದಳು, ನಾನು ಅವಳನ್ನಪ್ಪಿಕೊಂಡೆ.

**ನೆನೆದಾಗ ಕಣ್ಣತುಂಬೆಲ್ಲ ಹುಣ್ಣಿಮೆಯೊಳಗೆ ಹೂಬಾಣ ನಿನ್ನ ಹೆಸರು**

**(ಈಗ ಮಾತಿನದೇ ಕೆಲಸ, ಇನ್ನುಮುಂದೆ ಮೌನಕ್ಕೆ ರಜೆ. ಇಷ್ಟೆಲ್ಲ ಯೋಚಿಸುವವನಿಗೆ ಈ ಯೋಚನೆಗಳನೆಲ್ಲ ಮಾತಿಗಿಳಿಸಲಾಗದೇ? ಅವಳನ್ನು ಅವಳ ರಕ್ಷಣಾ ಕವಚದಿಂದ ಹೊರಕ್ಕೆಳೆಯುತ್ತೇನೆ, ನಾಳೆ ನಾನು ಬರ್ತಾ ಇದೀನಿ ನನ್ನವಳೇ. ತಯ್ಯಾರಾಗಿರು!)**

ಚಂದ್ರೋದಯವಾಯಿತು. ಊರೊಳಗಿನ ಗುಡಿಯ ಮೇಲೆ ಆಕಾಶದಲ್ಲಿ ಕಾರ್ತೀಕ ದೀಪೋತ್ಸವದ ಮದ್ದುಮತಾಪುಗಳು ಚಟಚಟನೆ ಸಿಡಿದು ರಾತ್ರಿಯನ್ನು ಬೆಳಗಿದವು, ಮತ್ತು ಕೆರೆಯ ನೀರಿನೊಳಗೆ ಪ್ರತಿಫಲನಗೊಂಡವು, ಇಬ್ಬರೂ ಕಣ್ಣೀರೊರೆಸಿಕೊಳ್ಳುತ್ತ ಮನೆಯೆಡೆಗೆ ನಡೆದೆವು. ಹಾಗೇ ಅವ್ವ 'ಬೆಳಿಗ್ಗೆ ವಾಪ್ಸು ಹೋಗ್ಬೇಕಲ್ಲ...' ಎಂದಳು ಮತ್ತು ಮೆಲ್ಲನೆ ನಕ್ಕು ಸರಿಯಾಗಿ ಊಹಿಸಿದಳು, 'ಹೆಸರೇನಂದೇ? ನೀಯಾರಿಕ?' ನಾನು ಅವಳ ಭುಜವನ್ನು ಹಿಡಿದುಕೊಂಡು ನಿಲ್ಲಿಸಿ ಕತ್ತಲಲ್ಲೇ ಅವಳ ಕೆನ್ನೆಗೊಂದು ಮುತ್ತನಿತ್ತು ನುಡಿದೆ, 'ಅಲ್ಲ! ನಿಹಾರಿಕಾ'

**ಸಿರಿಗೆರೆಯ ನೀರಿನಲಿ, ಬಿರಿದ ತಾವರೆಯಲ್ಲಿ ಕೆಂಪಾಗಿ ನಿನ್ನ ಹೆಸರು...**